

ಮೇರಿಯ ಬಾಲ್ಯದ ಮತ್ತು ಕುಟುಂಬದ ಚಿತ್ರಗಳು



ಮೇರಿ ಮತ್ತು ಅವಳ ತಾರುಣ್ಯದ ದಿನಗಳ ಆಕರ್ಷಣೆ ಕಾಜಿಮಿಯರ್



ಮ್ಯೂಸಿಯಂನಲ್ಲಿ ಸಂರಕ್ಷಿಸಿರುವ ಮೇರಿಯ ಹಸ್ತ ಬರಹಗಳು

ಕುಟುಂಬದವರೆಲ್ಲ ನೋವೊಲಿಪ್ಕಿ ಬೀದಿಗೆ ಹೋದರು. ಯುದ್ಧ ಸಮಯದಲ್ಲಿ ಇವೆಲ್ಲಾ ನಾಶವಾದವು. ಈಗ ಇದರ ಪುನರ್ ನಿರ್ಮಾಣ ಆಗಿದೆ'.

ಈ ಕೊಠಡಿಯಲ್ಲಿಯೇ ಮೇರಿ ಕ್ಯೂರಿಯ ಮತ್ತು ಅವಳ ಗಂಡ ಪಿಯೆರಿ ಕ್ಯೂರಿಯ ಚಿತ್ರಗಳಿವೆ. ಮೇರಿ ಬರೆದ ಪಿಯೆರಿಯ ಜೀವನ ಚರಿತ್ರೆಯ ಒಂದು ಪ್ರತಿಯನ್ನು ಇರಿಸಲಾಗಿದೆ. ಮೇಜಿನ ಮೇಲೆ ಒಂದು ಗಾಜಿನ ಶೀಶೆಯಲ್ಲಿ ರೇಡಿಯಂ ಬಣ್ಣದ ದ್ರಾವಣ.

ನಮ್ಮ ಗೈಡ್ ಮಿಲ್ಕಾ ವಾರ್ಸಾದ ಕಾಲೇಜಿನಲ್ಲಿ ವಿದ್ಯಾರ್ಥಿನಿ. ಬಹು ಉತ್ಸುಕತೆಯಿಂದ ನಮ್ಮನ್ನು ಮೇಲಿನ ಅಂತಸ್ತುಗಳಲ್ಲಿರುವ ವಸ್ತು ಸಂಗ್ರಹಾಲಯಕ್ಕೆ ಕರೆದೊಯ್ದಳು.

ಚಿಕ್ಕ ಕೊಠಡಿಯಲ್ಲಿ ಸಾವಿರಾರು ಚಿತ್ರಗಳು. ಕೆಲವು ಗೋಡೆಗಳ ಮೇಲೆ, ಕೆಲವು ಮೇಜುಗಳ ಮೇಲೆ ಮತ್ತು ಹಲವು ಸ್ಟ್ಯಾಂಡ್‌ಗಳ ಮೇಲೆ. ಒಂದೊಂದು ಚಿತ್ರದ ಮುಂದೆಯೂ ನಿಂತು ಅದರ ಬಗ್ಗೆ ತಿಳಿಯಲು ಒಂದೆರಡು ದಿನಗಳೇ ಬೇಕಾಗಬಹುದು. ಅಂದು ಫ್ರೆಟ್ಟಾ ಬೀದಿ ಇದ್ದ ಪರಿ, ಮೇರಿಯ ಕುಟುಂಬದ ಸದಸ್ಯರುಗಳು ಇರುವ ಚಿತ್ರ, ಮೇರಿ ಬರೆದಿರುವ ಅನೇಕ ಪತ್ರಗಳು, ಅವಳ ಖರ್ಚಿನ ಪುಸ್ತಕ, ಅವಳ ಯೌವನದ ಪ್ರೇಮಿ ಕಾಜಿಮಿಯರ್ ಇಲ್ಲಿ ಕಂಗೊಳಿಸಿದ್ದಾನೆ. ಪ್ಯಾರಿಸ್ಸಿನ ಸೋರ್ಬಾನಿನಲ್ಲಿ ನಡೆದ ಮೇರಿ–ಪಿಯೆರಿಯ ಮದುವೆಯ ಚಿತ್ರಪಟಗಳು ಸೇರಿದಂತೆ ಹಲವು ಚಿತ್ರಗಳಿವೆ.

ಮೇರಿ ಎರಡು ಮುಖ್ಯ ಪ್ರಯೋಗಗಳನ್ನು ಕೈಗೊಂಡಳು. ಮೊದಲನೆಯದು, ತನ್ನ ಗಂಡನೊಡನೆ ವಿಕಿರಣ ಪಟುತ್ವವನ್ನು (Radioactivity) ಕಂಡುಹಿಡಿದಳು. ಎರಡನೆಯದು, ಪಿಚ್ ಬ್ಲೆಂಡ್ ಎಂಬ ವಸ್ತುವಿನಿಂದ ರೇಡಿಯಂ ಮತ್ತು ಪೊಲೋನಿಯಂಗಳನ್ನು ತಾನೊಬ್ಬಳೇ ಬೇರ್ಪಡಿಸಿದಳು. ಈ ಸಾಹಸದಲ್ಲಿ ಅವಳು ಉಪಯೋಗಿಸಿದ ಸಲಕರಣೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಅವಳು ಸದಾ ತೊಡುತ್ತಿದ್ದ ಕಪ್ಪು ಅಂಗಿಯೂ ಇಲ್ಲಿದೆ.

ನಾಲ್ಕು ಯುದ್ಧ ವರ್ಷಗಳಲ್ಲಿ ಮೇರಿ ವಿಜ್ಞಾನಕ್ಕೆ ಬೈ ಹೇಳಿ ಯುದ್ಧರಂಗದಲ್ಲಿ ಸೈನಿಕರ ಎಕ್ಸ್ ರೇ ತೆಗೆಯುತ್ತಿದ್ದಳು. ಬಿಳಿಯುಡುಪಿನ ಮೇರಿಯನ್ನೂ ಇಲ್ಲಿ ನೋಡಬಹುದು. ಅವಳ ಅಮೆರಿಕ ಯಾತ್ರೆಗೆ ಕಾರಣಳಾಗಿ, ಅಪಾರ ಹಣವನ್ನು ಸಂಗ್ರಹಿಸಿ ಮೇರಿಗೆ ಒಂದು ಗ್ರಾಮ್ ರೇಡಿಯಂ ನೀಡಿದ ಅಮೆರಿಕನ್ ಮಹಿಳೆ ಮೇರಿ ಮ್ಯಾಟಿಂಗ್ಲಿಯ ಚಿತ್ರಗಳಿವೆ. ಅವಳು ಅಮೆರಿಕಕ್ಕೆ ಹೋದಾಗ ಅವಳ ಹಡಗಿನಲ್ಲಿದ್ದ ಗ್ರಾಮಾಫೋನ್ ಮೊದಲಾದ ಉಪಕರಣಗಳೂ ಇಲ್ಲಿವೆ. ಪ್ಯಾರಿಸ್ಸಿನ ಲ ಇನ್‌ಸ್ಟಿಟ್ಯೂಟ್ ಕ್ಯೂರಿಯಲ್ಲಿರುವ ಮೇರಿಯ ಕಚೇರಿಯ ಪ್ರತಿಕೃತಿ ಇಲ್ಲಿದೆ. ನೋಡಿ ಧನ್ಯರಾಗಿ ನಿಂತಾಗ ಮತ್ತೆ ಅಲೆಕ್ಸಾಂಡ್ರಾ ಹಾಜರಾದರು. ಅವರಿಗೆ ನಾನು ಹಿಂದೆ ರಚಿಸಿದ ಕನ್ನಡದ ಕಿರುಪುಸ್ತಕ 'ಮೇರಿ ಕ್ಯೂರಿ' ಮತ್ತು ಇಂಗ್ಲಿಷಿನ 'ಆಲ್ಬರ್ಟ್ ಐನ್‌ಸ್ಟೈನ್' ಪುಸ್ತಕಗಳನ್ನು ನೀಡಿದೆ. ಬಹು ಸಂತೋಷಪಟ್ಟು, ಅವನ್ನು ಪ್ರದರ್ಶಿಸುವುದಾಗಿ ಹೇಳಿದರು.

ನಾನು ಮುಂಬರುವ ನನ್ನ ಮೇರಿ ಕ್ಯೂರಿ ಪುಸ್ತಕಗಳ (ಕನ್ನಡ ಮತ್ತು ಇಂಗ್ಲಿಷ್) ಕರಡನ್ನು ಅಲೆಕ್ಸಾಂಡ್ರಾ ಮತ್ತು ಮಿಲ್ಕಾ ಅವರಿಗೆ ತೋರಿಸಿದೆ. ಇಬ್ಬರೂ ನಾನು ಉಪಯೋಗಿಸಿದ್ದ ಚಿತ್ರಗಳನ್ನು ಮೆಚ್ಚಿದರು. 'ದಯವಿಟ್ಟು ಮುದ್ರಣಕ್ಕೆ ಕಳುಹಿಸುವ ಮೊದಲು ಹಸ್ತಪ್ರತಿಯನ್ನು ನಮಗೆ ಕಳಿಸಿ. ಒಮ್ಮೆ ಓದಿ ನೋಡುತ್ತೇವೆ. ಏನಾದರೂ ಸಲಹೆಗಳಿದ್ದರೆ ನೀಡುತ್ತೇವೆ' ಎಂದರು.

ನಮ್ಮ ಮಾತು ಈವ್ ಕ್ಯೂರಿ ಬರೆದ ಮೇರಿಯ ಮೊಟ್ಟಮೊದಲ ಜೀವನಚರಿತ್ರೆಗೆ ತಿರುಗಿತು. ಮಗಳು ತಾಯಿಯಿಂದ ತುಸು ದೂರ ನಿಂತಿರುವುದು ಸ್ಪಷ್ಟ. ಆತ್ಮೀಯತೆ ಕಾಣುವುದಿಲ್ಲ. ಅಲೆಕ್ಸಾಂಡ್ರಾ ಒಂದು ಮಾತು ಹೇಳಿದರು. 'ನೋಡಿ, ಈವ್ ಅವಳ ಪುಸ್ತಕ ಪ್ರಕಟವಾಗುತ್ತಿದ್ದಂತೆ ಅದು ಹಲವಾರು ಭಾಷಾಂತರಗಳನ್ನು ಕಂಡಿತು. ಆದರೆ ಅದು ಪೋಲಿಷ್ ಭಾಷೆಗೆ ತರ್ಜುಮೆ ಆಗುವ ವೇಳೆಗೆ ಹಲವು ಭಾಷೆಗಳಲ್ಲಿ ಹೊರಬಂದಿತ್ತು. ಕಾರಣ ಮೇರಿಯ ಕುಟುಂಬ. ಅವರು ಮೇರಿಯ ಘನತೆ ಎಳ್ಳಷ್ಟೂ ಕಡಿಮೆ ಆದರೂ ಸಹಿಸುತ್ತಿರಲಿಲ್ಲ. ಅವರು ಪೋಲಿಷ್ ಭಾಷಾಂತರಕ್ಕೆ ಅನುಮತಿ ನೀಡಲು ಹಲವಾರು ವರ್ಷ ತೆಗೆದುಕೊಂಡರು'.

ಮೇರಿ ಆಗಾಗ್ಗೆ ಹೋಗುತ್ತಿದ್ದ ಚರ್ಚ್ ನೋಡಿದೆವು. ಅದರ ಬಳಿ ದೊಡ್ಡ ವಿಸ್ಲಾ ನದಿ. ಅದರ ದಡದಲ್ಲಿ ಮೇರಿ ಕ್ಯೂರಿಯ ಪ್ರತಿಮೆ.

'ನೀವು ಮೇರಿ ಕ್ಯೂರಿ ಇಲ್ಲಿ ಸ್ಥಾಪಿಸಿದ ರೇಡಿಯಂ ಸಂಸ್ಥೆಯನ್ನು ನೋಡಲೇಬೇಕು' ಎಂದು ಅಲೆಕ್ಸಾಂಡ್ರಾ ಸೂಚಿಸಿದರು. ಹೌದು, ಮೇರಿ ಪ್ಯಾರಿಸ್ಸಿನಲ್ಲಿ ಮತ್ತು ವಾರ್ಸಾದಲ್ಲಿ ರೇಡಿಯಂನ ವೈದ್ಯಕೀಯ ಉಪಯೋಗಗಳನ್ನು ಸಂಶೋಧಿಸಲು ಸಂಸ್ಥೆಗಳನ್ನು ತೆರೆದಳು. ಎರಡೂ ಇಂದಿಗೂ ಗಣನೀಯ ಸೇವೆ ಸಲ್ಲಿಸುತ್ತಿವೆ.

ಒಂದು ಟ್ಯಾಕ್ಸಿಯನ್ನು ಕರೆದು ನಮ್ಮೊಡನೆ ಮಿಲ್ಕಾಳನ್ನೂ ಕಳಿಸಿದರು. ವಾರ್ಸಾದ ರೇಡಿಯಂ ಸಂಸ್ಥೆ ಈಗ ದೊಡ್ಡ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸಿದೆ. ಅದರ ಒಳಗೆ ಹೋದೆವು. ಅಲ್ಲಿಂದ ಮಿಲ್ಕಾ ನಮ್ಮನ್ನು ಹಳೆಯ ವಾರ್ಸಾಗೆ ಕರೆತಂದಳು. ಟ್ಯಾಕ್ಸಿಗೆ ಹಣ ಕೊಡಲು ಹೋದಾಗ ತಿಳಿಯಿತು, ಮ್ಯೂಸಿಯಂ ಈ ವೆಚ್ಚವನ್ನು ತಾನೇ ಭರಿಸಿತ್ತು!

ಎರಡು ದಿನಗಳ ನಂತರ ಮ್ಯೂಸಿಯಂ ತನ್ನ ಫೇಸ್‌ಬುಕ್ ಪುಟದಲ್ಲಿ ನಮ್ಮ ಭೇಟಿಯ ಬಗ್ಗೆ ಚಿತ್ರಗಳನ್ನು ಪ್ರಕಟಿಸಿರುವುದು ನಮಗೆ ಎಲ್ಲಿಲ್ಲದ ಸಂತೋಷ ತಂದಿತು. ಇಂದಿಗೂ ಅಲೆಕ್ಸಾಂಡ್ರಾ ಮತ್ತು ಮಿಲ್ಕಾ ನಮ್ಮೊಡನೆ ಸಂಪರ್ಕದಲ್ಲಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in